ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಸೋಮವಾರ 20ನೇ ಏಪ್ರಿಲ್ 1998 ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ : 11.20 ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು : (ಶ್ರೀ ಚಂದ್ರಶೇಖರ ಮಾಮನಿ) ಅವರು ಪೀಠವನ್ನು ಅಲಂಕರಿಸಿದ್ದರು.

ಪ್ರಕಟಣೆ

ಉಪಾಧ್ಯಕ್ಷರು : ದಿನಾಂಕ 20.4.1998ರಂದು ವಿಧಾನ ಸಭೆಯ ಸದಸ್ಯರು ಮತ್ತು ಭಾರತೀಯ ಜನತಾ ಪಕ್ಷದ ಅಧ್ಯಕ್ಷರೂ ಆಗಿರುವ ಶ್ರೀ ಬಿ.ಎಸ್. ಯಡಿಯೂರಪ್ಪನವರು ಪತ್ರ ಬರೆದಿದ್ದು ಅದರಲ್ಲಿ ವಿಧಾನ ಸಭೆಯ ಸದಸ್ಯರಾದ ಶ್ರೀ ಕೆ.ಎಸ್. ಈಶ್ವರಪ್ಪನವರನ್ನು ವಿಧಾನ ಸಭೆಯಲ್ಲಿ ಬಿ.ಜೆ.ಪಿ ಶಾಸಕಾಂಗ ಪಕ್ಷದ ನಾಯಕರನ್ನಾಗಿ ಆಯ್ಕೆ ಮಾಡಿದ್ದೇವೆಂದು ತಿಳಿಸಿರುತ್ತಾರೆ. ಆದಕಾರಣ ಶ್ರೀ ಕೆ.ಎಸ್. ಈಶ್ವರಪ್ಪನವರನ್ನು ಬಿ.ಜೆ.ಪಿ. ಶಾಸಕಾಂಗ ಪಕ್ಷದ ನಾಯಕರೆಂದು ಪರಿಗಣಿಸುತ್ತೇನೆ. ಈಗ ಬೇಡಿಕೆಗಳ ಮೇಲೆ ಚರ್ಚೆ ಶ್ರೀ ಡಿ.ಆರ್.ಪಾಟೀಲ್‌ರವರು ಮಾತನಾಡಬೇಕು.

ಶ್ರೀ ಎನ್. ರಾಜಣ್ಣ : ಮಾನ್ಯ ಉಪಾಧ್ಯಕ್ಷರೇ, ನನ್ನದೊಂದು ಪಾಯಿಂಟ್ ಆಫ್ ಆರ್ಡರ್ ಇದೆ. ಕಾವೇರಿ ನೀರಿನ 4ನೇ ಹಂತದ ಕೆಲಸಕ್ಕಾಗಿ ಓ.ಇ.ಸಿ.ಎಫ್ ನವರು ಕರ್ನಾಟಕಕ್ಕೆ ಹಣವನ್ನು ಬಿಡುಗಡೆ ಮಾಡಬಾರದೆಂದು ತಮಿಳುನಾಡು ಸರ್ಕಾರದವರು ಪತ್ರ ಬರೆದಿದ್ದಾರೆ. ಬೆಂಗಳೂರು ನಗರದಲ್ಲಿ ಕುಡಿಯುವ ನೀರಿನ ಅಭಾವ ಜಾಸ್ತಿಯಿದೆ. ನಾನು ತಮ್ಮ ಮೂಲಕ ಇದರ ಚರ್ಚೆಗೆ ಅವಕಾಶ ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ. ಮೊದಲು ಬೇಡಿಕೆಗಳ ಮೇಲೆ ಚರ್ಚೆ ತೆಗೆದುಕೊಳ್ಳೋಣ. ಶ್ರೀ ಡಿ.ಆರ್. ಪಾಟೀಲ್‌ರವರು ಮಾತನಾಡಿ.

ಅಧ್ಯಕ್ಷರ ಅಪ್ಪಣೆ ಮೇರೆಗೆ

ಮಂಗಳೂರಿನಲ್ಲಿ ಜನ ಸಾಮಾನ್ಯರ ಪರವಾಗಿ ಸೇವೆಯನ್ನು ಮಾಡುವ ಮೂರು ಶಾಸಕರ ಮೇಲೆ ಅಲ್ಲಿನ ಜಿಲ್ಲಾಧಿಕಾರಿಗಳು ಕೇಸ್ ಹಾಕಿರುವುದರ ಬಗ್ಗೆ

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ಬಿ.ಜೆ.ಪಿ. ಶಾಸಕರುಗಳಾದ ನಾವೆಲ್ಲರೂ ಈಗ ಆಗಿರುವ ಅಪಮಾನವನ್ನು ಸಹಿಸಿಕೊಂಡು ಸುಮ್ಮನೇ ಕೂರುವುದಕ್ಕೆ ಆಗುವುದಿಲ್ಲ. ಬಹಳ ಗಂಭೀರವಾದ ವಿಷಯವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ಈಗ ಏನು ರೂಲ್ಸ್ ಇದೆ ಅದನ್ನು

ಬಿಟ್ಟು ನೀವು ಈ ಬಗ್ಗೆ ಚರ್ಚೆಗೆ ಅವಕಾಶ ಕೊಡಿ ಎಂದು ಕೇಳುವುದಕ್ಕೆ ಹೋಗುವುದಿಲ್ಲ. ಈಗ ಏನು ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ ಅದನ್ನು ಪ್ರಶ್ನೋತ್ತರ ಅವಧಿ ಮುಂಚೆಯೇ ತೆಗೆದುಕೊಳ್ಳಿ. ಮಂಗಳೂರಿನಲ್ಲಿ ಜನಸಾಮಾನ್ಯರ ಸೇವೆ ಮಾಡುತ್ತಿರುವ ಮೂರು ಜನ ಶಾಸಕರ ಮೇಲೆ ಅಪಮಾನವಾಗಿದೆ ಆದಕಾರಣ ಇದನ್ನು ನಾವು ಪ್ರಸ್ತಾಪ ಮಾಡುತ್ತಿದ್ದೇವೆ. ಇದುವರೆಗೂ ನಡೆದುಕೊಂಡು ಬಂದಿರುವ ಪದ್ಧತಿಯಂತೆ ಪ್ರಶ್ನೋತ್ತರ ಅವಧಿ ಮುಗಿದ ನಂತರ ನಿಲುವಳಿ ಸೂಚನೆಗೆ ಅವಕಾಶವಿದೆ. ಆದರೆ ಇವೊತ್ತು ಪ್ರಶ್ನೋತ್ತರ ಅವಧಿ ಮಧ್ಯಾಹ್ನವಿರುವುದರಿಂದ ನಾವು ಈಗ ಕೊಟ್ಟಿರುವ ನಿಲುವಳಿ ಸೂಚನೆ ಪ್ರಕಾರ ಈ ವಿಷಯ ಬಹಳ ಗಂಭೀರವಾಗಿರುವುದರಿಂದ ದಯಮಾಡಿ ತಾವು ರೂಲ್ಸನ್ನು ಸಸ್ಪೆಂಡ್ ಮಾಡಿ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಅವಕಾಶವಿದೆ.

ಉಪಾಧ್ಯಕ್ಷರು : ಅದು ಸಾಧ್ಯವಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ಹಾಗಾದರೆ ಇಲ್ಲಿ ಬಿ.ಜೆ.ಪಿ. ಶಾಸಕರು ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲವಾದ ಕಾರಣ ನಾವು ಹೊರಗಡೆ ಹೋಗುತ್ತೇವೆ.

ಉಪಾಧ್ಯಕ್ಷರು : ಯಡಿಯೂರಪ್ಪನವರೇ ತಾವೇ ಹೀಗೆ ನಡೆದುಕೊಂಡರೆ ಹೇಗೆ? ಸದನವನ್ನು ನಡೆಸುವುದಾದರೂ ಹೇಗೆ?

ಶ್ರೀ ಕೆ.ಎಸ್. ಈಶ್ವರಪ್ಪ : ಜನ ಸಾಮಾನ್ಯರ ವಿಚಾರಗಳನ್ನು ತೆಗೆದುಕೊಂಡು ಸೇವೆಯನ್ನು ಮಾಡುತ್ತಿರುವ ಮೂರು ಜನ ಶಾಸಕರ ಮೇಲೆ ಜಿಲ್ಲಾಧಿಕಾರಿಗಳು ಕೇಸ್ ಹಾಕಿದ್ದಾರೆ. ಈ ರಾಜ್ಯದಲ್ಲಿ ಜಿಲ್ಲಾಧಿಕಾರಿ ಡಿಕ್ಟೇಟರೆ, ಎನ್ನುವ ಅನುಮಾನ ನಮಗೆ ಬರುತ್ತಿದೆ. ಜಿಲ್ಲಾಧಿಕಾರಿಗಳ ಕಛೇರಿಗೆ ಅಕ್ರಮ ಪ್ರವೇಶ ಎಂದು ಕೇಸ್ ಹಾಕಿದ್ದಾರೆ. ಜಿಲ್ಲಾಧಿಕಾರಿಗಳ ಕಛೇರಿ ಅವರ ಸ್ವಂತ ಆಸ್ತಿಯೇ?

ಉಪಾಧ್ಯಕ್ಷರು : ಬೇಡಿಕೆಗಳ ಮೇಲೆ ಚರ್ಚೆಯನ್ನು ತೆಗೆದುಕೊಂಡು 4 ದಿವಸವಾಗಿದೆ. ಇನ್ನು ಚರ್ಚೆ ಪ್ರಾರಂಭವಾಗಿಲ್ಲದ ಕಾರಣ ಈಗ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ : ನಾವು ಪೂರ್ಣವಾಗಿ ನಿಮಗೆ ಸಹಕಾರ ಕೊಡಬೇಕು ಎಂಬುದು ನಮಗೆ ಗೊತ್ತಿದೆ. ಅದನ್ನು ನಾವು ಕೊಡುತ್ತೇವೆ. ಈಗಾಗಲೇ ಅಧಿವೇಶನ ಪ್ರಾರಂಭವಾಗಿ ನಾಲ್ಕೈದು ದಿವಸವಾಯಿತು. ನಾವು ಯಾವುದಾದರೂ ನಿಲುವಳಿ ಸೂಚನೆಗೆ ಹಠ ಹಿಡಿದಿದ್ದೇವೆಯೇ? ನಮ್ಮ ಶಾಸಕರು ಕಾನೂನು ಚೌಕಟ್ಟಿನಲ್ಲಿ ಕೆಲಸ ಮಾಡುತ್ತಿರಬೇಕಾದರೆ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳು ಅಪಮಾನ ಮಾಡಿರುವಂಥ ಘಟನೆ ನಡೆದಿರಬೇಕಾದರೆ ಇಲ್ಲಿ ಕಾರ್ಯಕಲಾಪ ಹೇಗೆ ನಡೆಸುತ್ತೀರಿ?

ಉಪಾಧ್ಯಕ್ಷರು : ಈ ವಿಷಯದ ಚರ್ಚೆಯನ್ನು ಮಧ್ಯಾಹ್ನ ಪ್ರಶ್ನೋತ್ತರ ಮುಗಿದ ಬಳಿಕ ತೆಗೆದುಕೊಳ್ಳೋಣ. ಈಗ ತಾವು ದಯವಿಟ್ಟು ಸಹಕಾರ ಕೊಡಿ.

ಶ್ರೀ ಕೆ.ಎಸ್. ಈಶ್ವರಪ್ಪ : ಇದೇ ರೀತಿಯ ರಕ್ಷಣೆ ಅಧಿಕಾರಿಗಳಿಗೆ ಈ ರಾಜ್ಯದಲ್ಲಿ ಸಿಗುತ್ತಿದೆ ಎನ್ನುವ ರೀತಿ ಆಗಿದೆ.

ಉಪಾಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಡಿ. ಮಂಜುನಾಥ್ (ಅರಣ್ಯ ಮಂತ್ರಿಗಳು) : ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್‌ನಲ್ಲಿ ಕಾರ್ಯಕಲಾಪದ ಪಟ್ಟಿ ತಯಾರಿಸುವಾಗ ಸ್ವಲ್ಪ ಹೆಚ್ಚುಕಡಿಮೆ ಆಗಿದೆಯಷ್ಟೆ. ಇಂದು ಮಧ್ಯಾಹ್ನ ಪ್ರಶ್ನೋತ್ತರ ಅವಧಿ ಇದೆ. ಅದಾದನಂತರ ಈ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳುತ್ತಾರೆ.

ಉಪಾಧ್ಯಕ್ಷರು : ನಾನು ಚರ್ಚೆಗೆ ನಿಮ್ಮ ವಿಷಯವನ್ನು ತೆಗೆದುಕೊಳ್ಳುತ್ತೇನೆ. ತಾವು ದಯಮಾಡಿ ಕುಳಿತುಕೊಳ್ಳಿ. ಈಗ ಡಿ.ಆರ್. ಪಾಟೇಲ್‌ರವರು ಪ್ರಾರಂಭ ಮಾಡಿ.

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ಬೇಡಿಕೆಗಳ ಮೇಲೆ ಚರ್ಚೆಯನ್ನು ಪ್ರಾರಂಭಿಸುತ್ತಾ ಬೇಡಿಕೆ ಸಂಖ್ಯೆ 52 ಮತ್ತು 53ರ ಸಹಕಾರ ಮತ್ತು ಕ್ರಮಪಡಿಸಿದ ಮಾರುಕಟ್ಟೆಗಳಿಗೆ ಸಂಬಂಧಪಟ್ಟ ಬೇಡಿಕೆಗಳಿಗೆ ವಿರೋಧಿಸುತ್ತ ನನ್ನ ಕೆಲವು ಅಭಿಪ್ರಾಯಗಳನ್ನು ಸರ್ಕಾರಕ್ಕೆ ತಿಳಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೇ, ಇಂಥ ಮುಖ್ಯವಾದ ಬೇಡಿಕೆಯ ಮೇಲೆ ಚರ್ಚೆ ನಡೆಯುವಾಗ ಅದಕ್ಕೆ ಸಂಬಂಧಪಟ್ಟ ಸಚಿವರೇ ಇಲ್ಲವಲ್ಲ.

ಉಪಾಧ್ಯಕ್ಷರು : ಸಹಕಾರಿ ಸಚಿವರು ಇದ್ದಾರೆ. ರೆಗ್ಯುಲೇಟೆಡ್ ಮಾರ್ಕೆಟ್‌ಗೆ ಸಂಬಂಧಪಟ್ಟ ಸಚಿವರು ಆಮೇಲೆ ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬರುತ್ತಾರೆಂದರೆ ಹೇಗೆ ಉಪಾಧ್ಯಕ್ಷರೇ, ಮೊದಲು ಬೇಡಿಕೆಗಳ ಮೇಲೆ ಚರ್ಚೆಯನ್ನು ತೆಗೆದುಕೊಳ್ಳಲಾಗುವುದೆಂದು ಎಂದು ಈಗತಾನೇ ನೀವೇ ಹೇಳಿದಿರಿ.

ಉಪಾಧ್ಯಕ್ಷರು : ದಯಮಾಡಿ ಕೇಳಿ. ಇವೊತ್ತಿನ ಅಜೆಂಡಾದಲ್ಲಿ ಮೊದಲು ವೈದ್ಯಕೀಯ ಶಿಕ್ಷಣದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಹಕಾರ ಅದರ ನಂತರ ಕೊನೆಯಲ್ಲಿ ಕ್ರಮಪಡಿಸಿದ ಮಾರುಕಟ್ಟೆಗಳ ಮೇಲೆ ಇದೆ. ಈಗ ಇಲ್ಲಿ ವೈದ್ಯಕೀಯ ಶಿಕ್ಷಣ ಸಚಿವರು, ಆರೋಗ್ಯ ಇಲಾಖಾ ಸಚಿವರು ಮತ್ತು ಸಹಕಾರ ಇಲಾಖಾ ಸಚಿವರು ಇದ್ದಾರೆ. ಮೊದಲು ಅವರು ಚರ್ಚೆಯನ್ನು ಪ್ರಾರಂಭ ಮಾಡಲಿ, ಸುಮ್ಮನೇ ಸಮಯವನ್ನು ಹಾಳು ಮಾಡುವುದು ಬೇಡ. ದಯಮಾಡಿ ತಾವು ಸಹಕಾರ ಕೊಡಬೇಕು.

ಶ್ರೀ ಎಸ್.ಎಸ್. ಪಾಟೀಲ್ (ಸಹಕಾರ ಸಚಿವರು) : ಮಾನ್ಯ ಉಪಾಧ್ಯಕ್ಷರೇ, ನಾನು ಮಾರುಕಟ್ಟೆ ಸಚಿವರ ಪರವಾಗಿ ಬರೆದುಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರೇ ಏಕೆ ಇಲ್ಲಿಗೆ ಬರಬಾರದು? ನಮಗೇನೋ ಇದರ ಬಗ್ಗೆ ಅರ್ಥವೇ ಆಗುತ್ತಿಲ್ಲ. ಅವರಿಗೇನು ಸ್ಪೆಷಲ್.

ಶ್ರೀ ಎಸ್.ಎಸ್. ಪಾಟೀಲ್ : ಅವರು ಬರುತ್ತಾರೆ.

(ಗೊಂದಲ)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಉಪಾಧ್ಯಕ್ಷರೇ, ತಾವು ದಯಮಾಡಿ ಕ್ಷಮಿಸಿ. ನೀವು ಎಲ್ಲಿಯವರೆವಿಗೆ ಅಂಥ ಸಚಿವರಿಗೆ ಛೀಮಾರಿ ಹಾಕುವುದಿಲ್ಲವೋ ಅಲ್ಲಿಯವರೆವಿಗೆ ಅವರು ಇದೇ ರೀತಿ ಮುಂದುವರಿದುಕೊಂಡು ಹೋಗುತ್ತಾರೆ. ಮೊದಲು ಅವರಿಗೆ ನೀವು ಶಿಸ್ತನ್ನು ಕಲಿಸಬೇಕು.

ಉಪಾಧ್ಯಕ್ಷರು : ವಿಪ್ ಅವರೇ ಮೊದಲು ಮಾರುಕಟ್ಟೆ ಸಚಿವರನ್ನು ಕರೆಯಿಸಿ. ಈಗ ಡಿ.ಆರ್. ಪಾಟೀಲ್‌ರವರೇ ತಾವು ಚರ್ಚೆಯನ್ನು ಪ್ರಾರಂಭ ಮಾಡಿ.

ವಿತ್ತೀಯ ಕಾರ್ಯಕಲಾಪಗಳು

1998-99ನೇ ಸಾಲಿನ ಬೇಡಿಕೆಗಳ ಸಂಖ್ಯೆ 28,29, 52 ಮತ್ತು 53ರ ಮೇಲೆ ನಡೆದ ಚರ್ಚೆ

ಶ್ರೀ ಡಿ.ಆರ್. ಪಾಟೀಲ್ : ಮಾನ್ಯ ಉಪಾಧ್ಯಕ್ಷರೇ, ನಮ್ಮ ದೇಶದೊಳಗೆ ಸಹಕಾರ ಚಳವಳಿ ಈ ಶತಮಾನದ ಆದಿಭಾಗದಲ್ಲಿ ಪ್ರಾರಂಭವಾಯಿತು. 1902ರಲ್ಲಿ ಮುಂಬೈ ಕರ್ನಾಟಕದ ಭಾಗದಲ್ಲಿ ಭೀಕರ ಬರಗಾಲವಾಯಿತು. ಆ ಸಮಯದಲ್ಲಿ ರೆವಿಂಗ್‌ಟನ್ ಎನ್ನುವ ಮೆಶಿನರಿ ಅವರು ಬರ ಪರಿಹಾರ ಕಾರ್ಯವನ್ನು ಆ ಭಾಗದಲ್ಲಿ ಕೈಗೊಂಡರು. ಗ್ರಾಮೀಣ ಪ್ರದೇಶದ ನಾಯಕರ ಜೊತೆ ಸಹಕಾರವನ್ನು ಪಡೆದುಕೊಂಡು ಸಾಕಷ್ಟು ಪರಿಹಾರ ಕಾರ್ಯವನ್ನು ಮಾಡಿ ಜನರ ಪ್ರೀತಿ ವಿಶ್ವಾಸವನ್ನು ಗಳಿಸುವುದರಲ್ಲಿ ಅವರು ಯಶಸ್ವಿಯಾದರು. ಆ ಪ್ರಸಂಗದೊಳಗೆ ಜನರು ಈ ಗ್ರಾಮೀಣ ಪ್ರದೇಶದಲ್ಲಿ ಸಾಲ ಕೊಡುವಂಥ ಸಿರಿವಂತರ ಕಪಿ ಮುಷ್ಠಿಯಲ್ಲಿ ಹೇಗೆ ಬಳಲುತ್ತಾರೆ ಹೇಗೆ ತೊಂದರೆಗೆ ಒಳಗಾಗುತ್ತಾರೆ ಎನ್ನುವ ಅನುಭವವನ್ನು ಪೂರ್ತಿಮಾಡಿಕೊಂಡಮೇಲೆ ಒಂದು ಸೂಕ್ತ ವ್ಯವಸ್ಥೆಯನ್ನು ಇವರಿಗೆ ಮಾಡಬೇಕು, ಜನ ಸಾಮಾನ್ಯರಿಂದಲೇ ಕಟ್ಟಲ್ಪಟ್ಟ ಒಂದು ವ್ಯವಸ್ಥೆಯಿಂದ ಅವರಿಗೆ ಸಕಾಲಿಕವಾಗಿ ಹಣಕಾಸಿನ ಒಂದು ಸಹಾಯ ಸಿಗುವಂಥ ಪತ್ತಿನ ವ್ಯವಸ್ಥೆಯನ್ನು ರೂಪಿಸಬೇಕು ಎನ್ನುವಂಥ ಹಿರಿಯ ಆಸೆಯಿಂದ 1904ರಲ್ಲಿ ಆಗಿನ ಮುಂಬೈ ಸರ್ಕಾರದಲ್ಲಿ ಮೊದಲನೇ ಸಹಕಾರಿ ಕಾನೂನು ಜಾರಿಗೆ ಬಂತು. ಮುಂದೆ 1905ರಲ್ಲಿ ಬಹುತೇಕ ಇಡೀ ದೇಶದಲ್ಲಿ ನಮ್ಮ ತಾಲ್ಲೂಕಿನಲ್ಲಿ ಮೊದಲನೇ ಸಹಕಾರಿ ಪತ್ತಿನ ಸಂಸ್ಥೆ ಕಣೆನಾಳ್ ಗ್ರಾಮದಲ್ಲಿ ಅಸ್ತಿತ್ವಕ್ಕೆ ಬಂತು. ನಮ್ಮ ಕಡೆ ಒಂದು ಪ್ರತೀತಿ ಇದೆ. ಏನೇ ಕೆಲಸ ಮಾಡಬೇಕಾದರೂ ಮೊದಲು ಕುರುಬರಿಗೆ ಬೋಣಿ ಮಾಡಬೇಕು. ಹಾಗಾಗಿ ಕುರುಬರು ಬಹಳಷ್ಟು ಜನಸಂಖ್ಯೆ ಇರುವ ಈ ಗ್ರಾಮದಲ್ಲಿ ಕುರುಬರು ಆ ಗ್ರಾಮದ ಗೌಡರು ಹೌದು. ಹೆಸರು ಸಿದ್ದನಗೌಡರು. ಅವರ ನೇತೃತ್ವದಲ್ಲಿ ಆ ಭಾಗದ ಆ ತಾಲ್ಲೂಕಿನ ಎಲ್ಲಾ ಸಹಕಾರಗಳು ಒಡಗೂಡಿ ರೆಮಿಂಗ್‌ಟನ್ ಅವರ ಸಹಕಾರದಿಂದ ಅವರ ಸ್ನೇಹಿತರಾದಂತಹ ಆಗಿನ ರಿಜಿಸ್ಟರ್ ಆದಂತಹ ಮುಂಬೈನಲ್ಲಿ ಆಗಿರುವಂತಹ ಮೆಟ್ರಿಲ್ ಅವರ ಸಹಕಾರದಿಂದ ಮೊದಲ ಪತ್ತಿನ ಸಹಕಾರಿ ಸಂಸ್ಥೆ ಬಂತು. ಆದರ ಉದ್ದೇಶವೇನೆಂದರೆ ಜನರನ್ನು ಗ್ರಾಮೀಣ ಭಾಗದ ಸಾಹುಕಾರರ ಕಪಿಮುಷ್ಟಿಯಿಂದ ಬಿಡುಗಡೆ ಮಾಡಬೇಕೆನ್ನುವುದು ಅವರ ಘನ ಉದ್ದೇಶ. 1993 ವರ್ಷದಲ್ಲಿ ನಾವು ಮಾಡಿದ ಸಾಧನೆಯನ್ನು ಅವಲೋಕನ ಮಾಡಿದಾಗ ನಾವು ಆದರಲ್ಲಿ ಯಶಸ್ವಿಯಾಗಿದ್ದೇವೋ, ಫೇಲ್